ಕರ್ನಾಟಕ ಸರ್ಕಾರ

# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

**ಪ್ರೊ. ಟಿ.ಡಿ. ಕೆಂಪರಾಜು**
ಕುಲಪತಿಗಳು

ಶ್ರೀ ದೇವರಾಜ್ ಅರಸ್ ಬಡಾವಣೆ
ಟಮಕ, ಕೋಲಾರ – 563 103
ದೂರವಾಣಿ : +91 8152 243150
+91 8152 243151
ಇ-ಮೇಲ್: vc@bnu.ac.in

ಸಂಖ್ಯೆ: ಬೆಂ.ಉ.ವಿ.ವಿ/ಪ್ರಾಂ/ಮೌಲ್ಯಮಾಪನ ಪದವಿ/ 165 /2018-19

ದಿನಾಂಕ: 19.06.2019

**ವಿಷಯ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಪ್ರಥಮ ಪದವಿ ಎರಡನೇ ಸೆಮಿಸ್ಟರ್‌ನ ಇಂಗ್ಲೀಷ್ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಎಲ್ಲಾ ಅರ್ಹ ಮೌಲ್ಯಮಾಪಕರನ್ನು ಕಳುಹಿಸಿಕೊಡುವ ಬಗ್ಗೆ.**

* * *

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತಿಳಿಸುವುದೇನೆಂದರೆ, ಪ್ರಥಮ ವರ್ಷ ಎರಡನೇ ಸೆಮಿಸ್ಟರ್‌ನ ಪರೀಕ್ಷೆಗಳು ಅಂತಿಮ ಘಟ್ಟ ತಲುಪಿದ್ದು ಜೂನ್ 22,2019ರಂದು ಕೊನೆಗೊಳ್ಳಲಿದೆ. ಈಗಾಗಲೇ ಪರೀಕ್ಷೆ ಮುಗಿದಿರುವ ವಿಷಯಗಳ ಮೌಲ್ಯಮಾಪನ ಕಾರ್ಯ ಉತ್ತಮ ಪ್ರಗತಿಯಲ್ಲಿದೆ. ನಿಮಗೆಲ್ಲರಿಗೂ ತಿಳಿದಿರುವಂತೆ, ದಿನಾಂಕ.29.05.2019ರಂದು ನಿಗದಿಯಾಗಿದ್ದ ಇಂಗ್ಲೀಷ್ ಪತ್ರಿಕೆಯ ಪರೀಕ್ಷೆಯನ್ನು ಸ್ಥಳೀಯ ಚುನಾವಣೆ ದಿನಾಂಕ ಪ್ರಕಟವಾದ್ದರಿಂದ ದಿನಾಂಕ 22.06.2019ಕ್ಕೆ ಮುಂದೂಡಿ ವೇಳಾಪಟ್ಟಿಯನ್ನು ಪ್ರಕಟಿಸಲಾಯಿತು. ನಂತರ ಈ ಬಗ್ಗೆ ಚಿಂತಿಸಿ ಇಂಗ್ಲೀಷ್ ಪತ್ರಿಕೆ ಪರೀಕ್ಷೆ ನಡೆದು ಅದರ ಮೌಲ್ಯಮಾಪನ ಮಾಡಲು ಸುಮಾರು 10ರಿಂದ 15 ದಿನಗಳು ಬೇಕಾಗುತ್ತದೆ ಎಂದು ಅಂದಾಜು ಮಾಡಲಾಯಿತು. ಇದರಿಂದ ಫಲಿತಾಂಶ ಪ್ರಕಟಣೆಯು ವಿಳಂಬವಾಗಬಹುದೆಂದು ಮನಗಂಡು ಮುಂದೂಡಿದ (postpone) ದಿನಾಂಕ:22.06.2019ರ ಬದಲಾಗಿ 10.06.2019ಕ್ಕೆ ಪೂರ್ವಭಾವಿಯಾಗಿ (prepone) ಮಾಡುವ ಸಂಬಂಧ ತೀರ್ಮಾನಿಸಲು ಎಲ್ಲಾ ಕಾಲೇಜಿನ ಪ್ರಾಂಶುಪಾಲರ ಸಭೆಯನ್ನು ದಿನಾಂಕ 04.06.2019ರಂದು ಕರೆಯಲಾಗಿತ್ತು, ಸದರಿ ಸಭೆಯಲ್ಲಿ ಈ ವಿಷಯವನ್ನು ಸುದೀರ್ಘವಾಗಿ ಚರ್ಚಿಸಲಾಯಿತು, ಈಗಾಗಲೇ ಮೂಂದೂಡಲಾಗಿರುವ ದಿನಾಂಕವನ್ನು ಮತ್ತೆ ಪೂರ್ವಭಾವಿಯಾಗಿ (prepone) ದಿನಾಂಕ ನಿಗದಿ ಮಾಡಿದರೆ ಹಲವಾರು ವಿದ್ಯಾರ್ಥಿಗಳು ಇದರಿಂದ ಗೊಂದಲಕ್ಕೆ ಒಳಗಾಗುತ್ತಾರೆ. ಜೊತೆಗೆ ಈವರೆವಿಗೂ ಯಾವುದೇ ಸಮಸ್ಯೆಗಳಿಲ್ಲದೆ ಹಿಂದಿನ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿರುವುದರಿಂದ ಈ ಹಂತದಲ್ಲಿ ಅನಾವಶ್ಯಕವಾಗಿ ಗೊಂದಲ ಮತ್ತು ಸಮಸ್ಯೆಗಳಿಗೆ ಅವಕಾಶ ಕೊಡುವುದು ಬೇಡ, ಈಗಾಗಲೇ ನಿಗದಿಪಡಿಸಿರುವಂತೆ 22.06.2019ರಂದೇ ಪರೀಕ್ಷೆ ನಡೆಸುವುದು ಸೂಕ್ತ ಎಂದು ಚರ್ಚಿಸಿ ತೀರ್ಮಾನಿಸಲಾಯಿತು. ಮುಂದುವರೆದು ತಾವುಗಳೆಲ್ಲರೂ ತಮ್ಮ ಕಾಲೇಜಿನ ಎಲ್ಲಾ ಇಂಗ್ಲೀಷ್ ಅಧ್ಯಾಪಕರನ್ನು ಮೌಲ್ಯಮಾಪನ ಕಾರ್ಯಕ್ಕೆ ತಪ್ಪದೆ ಕಳುಹಿಸಿಕೊಡುವುದಾಗಿ ತಿಳಿಸಿ, ಸದರಿ ವ್ಯವಸ್ಥೆಯಿಂದ ಒಂದೆರಡು ದಿವಸಗಳ ವ್ಯತ್ಯಾಸದಲ್ಲಿ ಇಂಗ್ಲೀಷ್ ಮೌಲ್ಯಮಾಪನ ಕಾರ್ಯವನ್ನು ಮುಗಿಸಬಹುದು ಎಂದು ಅಭಿಪ್ರಾಯ ಪಟ್ಟು ಸರ್ವಾನುಮತದಿಂದ ತೀರ್ಮಾನಿಸಿ ಈ ಕಾರ್ಯದಲ್ಲಿ ಸಂಪೂರ್ಣ ಭರವಸೆಯನ್ನು ನೀಡುವುದಾಗಿಯೂ ತಿಳಿಸಿರುತ್ತೀರಿ.

ತಮ್ಮ ಈ ತೀರ್ಮಾನದ ಹಿನ್ನಲೆಯಲ್ಲಿ ಈಗ ತಿಳಿಸುವುದೇನೆಂದರೆ, ದಿನಾಂಕ:22.06.2019ರಂದು ನಡೆಯುವ ಇಂಗ್ಲೀಷ್ ಪತ್ರಿಕೆಯ ಮೌಲ್ಯಮಾಪನ ಕಾರ್ಯವು ದಿನಾಂಕ:24.06.2019ರಂದೇ ಪ್ರಾರಂಭಗೊಳ್ಳುತ್ತಿದೆ (ಕುಲಸಚಿವರು (ಮೌ) ಇವರ ಮಾಹಿತಿಯಂತೆ) ಆದ್ದರಿಂದ ದಯಮಾಡಿ ದಿನಾಂಕ:04.06.2019ರಂದು ನಡೆದ ಸಭೆಯಲ್ಲಿ ತಾವು ತೀರ್ಮಾನಿಸಿ ತಿಳಿಸಿರುವಂತೆ ತಮ್ಮ ಕಾಲೇಜಿನ ಎಲ್ಲಾ ಅರ್ಹ ಇಂಗ್ಲೀಷ್ ಉಪನ್ಯಾಸಕರನ್ನು ತಪ್ಪದೆ ದಿನಾಂಕ:24.06.2019ರಂದು ಪ್ರಾರಂಭಗೊಳ್ಳಲಿರುವ ಮೌಲ್ಯಮಾಪನ ಕಾರ್ಯಕ್ಕೆ ತಪ್ಪದೆ ಕಳುಹಿಸಿಕೊಡಬೇಕೆಂದು ಕೋರಿಕೆ.

-2-

ಈ ಮೂಲಕ ಹಿಂದಿನ ಸೆಮಿಸ್ಟರ್‌ನಂತೆ ಈ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶಗಳನ್ನು ಆದಷ್ಟು ಬೇಗ ಪ್ರಕಟಿಸಲು ತಾವು ಸಹಕಾರ ನೀಡಬೇಕೆಂದು ಕೋರಿಕೆ.

ಕುಲಪತಿಗಳು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಗೆ,

ಎಲ್ಲಾ ಪ್ರಾಂಶುಪಾಲರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳು
ಮತ್ತು ಕಾಲೇಜು ಶಿಕ್ಷಕರ ಗಮನಕ್ಕೆ.

ಪ್ರತಿಗಳು:

1. ಕುಲಸಚಿವರು, ಆಪ್ತ ಸಹಾಯಕರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563103.
2. ಕುಲಸಚಿವರ(ಮೌ), ಆಪ್ತ ಸಹಾಯಕರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563103.
3. ಕಛೇರಿ ಪ್ರತಿ.